ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು :— ಒಂದು ಪ್ರಕಟಣೆ ಇದೆ.

9. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡಂತೆ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 23-11-2000ರಂದು 2000ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನು (ತಿದ್ದುಪಡಿ) ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆ"

10. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಯಲಗಳ ವಿಧೇಯಕ 2000 ಪರ್ಯಾಲೋಚನಾ ಪ್ರಸ್ತಾವ

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ರಾಷ್ಟ್ರ, ಪ್ರಪಂಚದಲ್ಲಿ ಶಿಕ್ಷಣ ಕ್ಷೇತ್ರ ಬಹಳಷ್ಟು ಬದಲಾವಣೆಯನ್ನು ನಿರಾತಂಕವಾಗಿ ಕಂಡುಕೊಂಡು ಬಂದಿದೆ. ರಾಜ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದ್ದು

ಇವೆಲ್ಲಕ್ಕೂ ಪ್ರತ್ಯೇಕವಾದ ವಿಧೇಯಕ ಮತ್ತು ಕಾನೂನುಗಳಿವೆ. ಇವೆಲ್ಲವನ್ನೂ ಸೇರಿಸಿ 1976ರಲ್ಲಿ ಸಮಗ್ರವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯವೆಂಬ ಆಕ್ಟ್ ಅನ್ನು ತಗೆದುಕೊಂಡು ಬರಲಾಯಿತು. ಇದಾದನಂತರ, ಸದರಿ ಆಕ್ಟ್‌ಗೆ ಇನ್ನೂ ಹೆಚ್ಚು ಬದಲಾವಣೆಗಳನ್ನು ಮಾಡಬೇಕಿದ್ದುವ ಉದ್ದೇಶಕ್ಕಾಗಿ ಡಾ: ರಾಜ್ ಆಯೋಗ ನೇಮಿಸಿ ಅವರು 1986ರಲ್ಲಿ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟರು. ಬಳಿಕ ಆ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಬೇಕಿದ್ದುವಂಥ ಸಂದರ್ಭದಲ್ಲಿ ಅಂದಿನ ಚಾನ್ಸಲರ್ ಆವರು ಮತ್ತೊಂದು ಸಮಿತಿ ರಚಿಸಿ ಅದಕ್ಕೆ ಪ್ರೊ: ಟಿ. ನವನೀತರಾವ್ ಎನ್ನುವವರನ್ನು ಅಧ್ಯಕ್ಷರನ್ನಾಗಿ ಮಾಡಿ, ಶಿಕ್ಷಣ ಕ್ಷೇತ್ರದಲ್ಲಿ ಯಾವ ರೀತಿ ಬದಲಾವಣೆ ತರಬೇಕು, ವಿಶ್ವವಿದ್ಯಾನಿಲಯಗಳು ಸಮಾಜಕ್ಕೆ ಅನುಗುಣವಾಗಿ ಯಾವ ರೀತಿಯ ಶಿಕ್ಷಣ ಕೊಡಬೇಕೆನ್ನುವ ದೃಷ್ಟಿಯಲ್ಲಿ ಅವರಿಗೆ ಅನೇಕ ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟು ಒಂದು ಸಮಿತಿಯನ್ನು ರಚನೆ ಮಾಡಲಾಯಿತು. 1992ರಲ್ಲಿ ರಚಿಸಲಾದ ಈ ಸಮಿತಿಯು 1994ರಲ್ಲಿ ಸುಮಾರು 80 ಸಲಹೆಗಳುಳ್ಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತದೆ. ಈ ಸಲಹೆಗಳನ್ನು ಗಮನಕ್ಕೆ ತಂದುಕೊಂಡು ಸದರಿ ವಿಶ್ವವಿದ್ಯಾನಿಲಯಗಳ ಕಾಯಿದೆಗೆ ಸಮಗ್ರವಾಗಿ ಬದಲಾವಣೆ ತರುವುದಕ್ಕೆ ಇದುವರೆವಿಗೂ ಪ್ರಯತ್ನ ಮಾಡಿರಲಿಲ್ಲ. ಆ ಕಾರಣಕ್ಕಾಗಿಯೇ ಇವೊತ್ತು ನಾವು ಸರ್ಕಾರದಿಂದ ಆ ಕುರಿತಾದ ಸಮಗ್ರ ವಿಧೇಯಕವನ್ನು ತಗೆದುಕೊಂಡು ಬಂದಿದ್ದೇವೆ. ಇದರಲ್ಲಿ ಪ್ರಾಮುಖ್ಯವಾಗಿರುವ 5-6 ವಿಷಯಗಳ ಬಗ್ಗೆ ಮೊದಲು ಹೇಳಿ ನಂತರ ಉಳಿದ ವಿಷಯಗಳ ಬಗ್ಗೆ ಹೇಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇದುವರೆವಿಗೂ ಏನು ಹೇಳಿದರೆಂದು ಯಾರಾದರೂ ಹೇಳಲಿ ನೋಡೋಣ. ಈಗ ಯಾರೂ ಕೂಡ ಕೇಳಿಸಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ನಾವು ಬೆಳಿಗ್ಗೆ 9-00ಗಂಟೆಗೆ ಬಂದಿದ್ದು, ಈಗ ತುಂಬಾ ಸಮಯವಾಗಿರುವುದರಿಂದ ದಯವಿಟ್ಟು ವಿಷಯವನ್ನು ನಾಳೆ ಮಂಡಿಸಬೇಕು. ಇಲ್ಲದಿದ್ದರೆ, ಯೂನಿವರ್ಸಿಟಿ ಹೋಗಿ ಸೈಟು ಸೂಲ್ ಆಗುತ್ತದೆ!

ಡಾ: ಜಿ. ಪರಮೇಶ್ವರ:— ನಾನು ಈಗ ವಿಷಯವನ್ನು ಪ್ರಾರಂಭಿಸಿದ್ದು, ಮುಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಸಚಿವರೆ, ನಾಳೆ ನೀವು ಫ್ರೆಶ್ ಆಗಿ ಬನ್ನಿ. ಆಗ ನೀವು ಏನು ಹೇಳುತ್ತೀರೋ ಅದನ್ನು ಪ್ರೆಸ್‌ನವರು ಬರೆದುಕೊಳ್ಳುವುದು ಬಹಳ ಮುಖ್ಯ.

(ಈ ಹಂತದಲ್ಲಿ ಹಲವಾರು ವಿರೋಧ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ವಿಷಯವನ್ನು ಮಾನ್ಯ ಸಚಿವರು ನಾಳೆ ಮಂಡಿಸಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೇಳಿದರು)

ಅಧ್ಯಕ್ಷರು :— ನೀವು ನನಗೆ ಹೇಳಿದರೆ ಹೇಗೆ? ನಾನು ಎರಡೂ ಕಡೆ ಇಳ್ಳುನಲ್ಲಿ ಸಿಲುಕಿಕೊಂಡಿರುವುದರಿಂದ ತಾವು ಮಾನ್ಯ ಚಂದ್ರೇಗೌಡರಿಗೆ ಹೇಳಬೇಕು..

ಶ್ರೀ ಡಿ.ಬಿ. ಚಂದ್ರೇಗೌಡ :— ವಿಷಯವನ್ನು ನಾಳೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು :— ಈಗ ಸಭೆಯನ್ನು ಮುಂದುಡಿ ಮತ್ತೆ ನಾಳೆ ಬೆಳಿಗ್ಗೆ 9-30 ಗಂಟೆಗೆ ಸೇರುವುದು.

(ಸದನವು ರಾತ್ರಿ 8 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 24ನೇ ನವೆಂಬರ್ ಮಾಹೆ 2000ರಂದು ಶುಕ್ರವಾರ ಬೆಳಿಗ್ಗೆ 9-30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಚಿಚ್ಚಿನ ಲಿಖಿತ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)